ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ೧೮ನೇ ಜೂನ್ ೧೯೯೦, ಜ್ಯೇಷ್ಠ ೨೮, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣರವರು) ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಮಾನ್ಯ ಜಾಲಪ್ಪನವರು ಇಲ್ಲ, ಇವತ್ತು ಜಾಲಪ್ಪನವರ ಬರ್ತ್‌ಡೇ, ಎಲ್ಲ ಸದಸ್ಯರ ಪರವಾಗಿ ಅವರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

ಪ್ರಶ್ನೆಗಳು

(ಪ್ರಶ್ನೆ ಸಂಖ್ಯೆ ೧೯೭(ಉಳಿದ).—ಮಾನ್ಯ ಸದಸ್ಯರು ಗೈರುಹಾಜರು)
ಪ್ರಶ್ನೆ ಸಂಖ್ಯೆ ೧೯೮(೬೧೦)

ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣದ ಕುಡಿಯುವ ನೀರಿನ ಅಭಾವದ ಬಗ್ಗೆ

೬೧೦. **ಶ್ರೀ ಕೆ. ಲಕ್ಕಪ್ಪ** (ಕುಣಿಗಲ್).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕುಣಿಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಆಭಾವ ತೀವ್ರವಾಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಯಾವುದಾದರೂ ಯೋಜನೆಯು ತಯಾರಾಗಿದೆಯೇ, ಹಾಗೂ ಮಂಜೂರಾಗಿದೆಯೇ ;

ಇ) ಹಾಗಿದ್ದಲ್ಲಿ ಅದು ಯಾವಾಗ ಕಾರ್ಯಗತವಾಗುತ್ತದೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಹೌದು. ಮಾರ್ಕೋನಹಳ್ಳಿ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಯೋಜನೆಯೊಂದನ್ನು ಪರಿಷ್ಕರಿಸಲಾಗಿದೆ. ಅದರ ಅಂದಾಜು ವೆಚ್ಚ ೩೬.೦೦ ಲಕ್ಷ ರೂ.ಗಳಾಗಬಹುದು.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದ ಪ್ರಸ್ತಾವನೆ ಬಂದ ನಂತರ ಸರ್ಕಾರವು ಪರಿಶೀಲಿಸುತ್ತದೆ.

ಶ್ರೀ ಕೆ. ಲಕ್ಕಪ್ಪ.—ಬಹಳ ವರ್ಷಗಳಿಂದ ಅಲ್ಲಿ ನೀರು ಕೇಳುತ್ತಾ ಇದ್ದಾರೆ. ನಗರ ಬೆಳೆಯುತ್ತಾ ಇದೆ ಮತ್ತು ಇದು ಹೆದ್ದಾರಿಯಲ್ಲಿ ಇರತಕ್ಕಂಥ ನಗರ. ಈ ನಗರದ ಜನಸಂಖ್ಯೆಯೂ ಕೂಡ ಅಷ್ಟೇ ಹೆಚ್ಚಾಗುತ್ತಾ ಇದೆ. ಬೆಳೆಯುತ್ತಿರುವ ಈ ನಗರಕ್ಕೆ ನೀರಿನ ವ್ಯವಸ್ಥೆಯಿಲ್ಲದೆ ಬಹಳ ವರ್ಷಗಳಿಂದ ಜನ ಬಹಳ ಕಂಗಾಲಾಗಿದ್ದಾರೆ. ಈ ಪ್ರಶ್ನೆಗೆ ತಾವು ಲಾಂಗ್ ರೇಂಜ್ ಪ್ಲಾನಿಂಗ್ ಮೇಲೆ ಕೊಟ್ಟಿದ್ದಂಥ

ಉತ್ತರ ಇದೆ. ಏಕೆಂದರೆ ಈಗನವುಗೆ ತಕ್ಷಣ ನೀರಿನವ್ಯವಸ್ಥೆ ಮಾಡುವುದಕ್ಕೆ ಏನಾದರೂ short-term measures, whether the Government has taken in this regard to meet the situation in the town's drinking water supply?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಕುಣಿಗಲ್ ನಗರದ ಪುರಸಭೆಯ ಒಟ್ಟು ಜನಸಂಖ್ಯೆ ಸುಮಾರು ೨೧ ಸಾವಿರ ಎಂದು ತಿಳಿದು ಬಂದಿದೆ. ಅಲ್ಲಿ ನೀರಿನ ಸಮಸ್ಯೆ ಇದೆಯೆಂತಲೂ ಸರ್ಕಾರಕ್ಕೆ ಅರ್ಥವಾಗಿದೆ. ಬಹುಶಃ ಮಾನ್ಯ ಸದಸ್ಯರು ಏನಾ ಬಯಕೆಯನ್ನು ಅದು ಜಾಗ್ರತೆ ಆಗಬೇಕು ಎಂದು ವ್ಯಕ್ತಪಡಿಸುತ್ತಾ ಇದ್ದಾರೆ. ಅದನ್ನು ಸರ್ಕಾರದ ಆರ್ಥಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಜಾಗ್ರತೆ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ, ಆದರ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ ಎಂದು ನಿಮ್ಮ ಮುಂಖಾಂತರ ಮಾನ್ಯ ಸದಸ್ಯರಿಗೆ ನಾನು ತಿಳಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ತಮ್ಮ ಉತ್ತರದಲ್ಲಿ ಮಾರ್ಕೋನಹಳ್ಳಿ ರಿಸರ್ವಾಯರ್‌ನಿಂದ ನೀರನ್ನು ಈ ಪಟ್ಟಣಕ್ಕೆ ಒದಗಿಸಬೇಕಾಗಿದ್ದರೆ ೩೬೦ ಲಕ್ಷ ರೂಪಾಯಿಬೇಕು ಎಂದು ಹೇಳಿದ್ದೀರಿ. ಈ ಅಂದಾಜು ಯಾವಾಗ ತಯಾರಾಗಿದೆ. ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ. ಈಗಾಗಲೇ ಬಂದು ಲಕ್ಷ ರೂಪಾಯಿನಷ್ಟು ರಿಲೀಸ್ ಮಾಡಿದ್ದಾರೆ. ೨-೩ ಬೋರ್ವೆಲ್‌ಗಳನ್ನು ತೆಗೆಸಿದ್ದೇವೆ.

ಇದರ ಜೊತೆಗೆ ಒಂದು ಕೋಟಿ ರೂಪಾಯಿ ಯೋಜನೆ ಮಾಡುತ್ತೇವೆ ಎಂದು ನಿಮ್ಮ ಕಮಿಷನರ್ ಅನ್ನು ನಾನು ಫೋನ್ ಮಾಡಿದಾಗ ಹೇಳಿದ್ದಾರೆ. ಆದುದರಿಂದ ಈ ಬಗ್ಗೆ ತಕ್ಷಣ ಏನಾದರೂ ಮತ್ತೆ ಬೋರ್ವೆಲ್‌ಗಳನ್ನು ಹಾಕುವುದಕ್ಕೆ ಸ್ವಲ್ಪ ಹಣವನ್ನು ತಾವು ರಿಲೀಸ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಸಮಗ್ರ ಯೋಜನೆಯನ್ನು ನಂತರ ಕೈಗೊಳ್ಳಲಾಗುತ್ತದೆ ಆದರೆ ಬೋರ್ವೆಲ್ ಕಾರ್ಯಕ್ರಮ ಏನಿದೆ, ಅದಕ್ಕೆ ಎಷ್ಟು ಬೇಡಿಕೆ ಇದೆ ಎಂಬುದನ್ನು ಅವರು ಸದನದ ಹೊರಗಡೆನೂ ಕೂಡ ನನಗೆ ತಿಳಿಸುವುದಾದರೆ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಅವರಿಗೆ ಆಶ್ವಾಸನೆ ಕೊಡುತ್ತಾ ಇದ್ದೇನೆ.

(ಪ್ರಶ್ನೆ ಸಂಖ್ಯೆ ೧೫೯ (೬೨೮).—ಮಾನ್ಯ ಸದಸ್ಯರು ಗೈರುಹಾಜರು)

ರಾಜ್ಯದ ಪೌರಕಾರ್ಮಿಕರ ಬಗ್ಗೆ

೪೩೫. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಬಂದರು, ಮೂಲಸೌಕರ್ಯ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ರಾಜ್ಯದಲ್ಲಿರುವ ಒಟ್ಟು ಪೌರ ಕಾರ್ಮಿಕರ ಸಂಖ್ಯೆ ಎಷ್ಟು?

೨) ಇದರಲ್ಲಿ ಎಷ್ಟು ಜನರಿಗೆ ವಸತಿ ಸೌಕರ್ಯ ಒದಗಿಸಲಾಗಿದೆ?

೩) ವಸತಿ ಸೌಕರ್ಯ ಇಲ್ಲದ ಪೌರ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ೧೬,೬೬೮.

೨) ೪,೨೪೬

೩) ರಾಜ್ಯದ ವಿವಿಧ ಮಹಾನಗರಪಾಲಿಕೆ, ನಗರಸಭೆ ಹಾಗೂ ಪುರಸಭೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಏರ್ಪಡಿಸುವುದೇ ಆಯಾಯ ನಗರಪಾಲಿಕೆ ಪುರಸಭೆಗಳು ಹೇಳ್ಕಿನ ಕಾರ್ಯಜಾರಿಸುತ್ತಿವೆ ಮೈಸೂರು ಮಹಾನಗರಪಾಲಿಕೆಯು ನಗರಾಭಿವೃದ್ಧಿ ಪ್ರಾಧಿಕಾರದಿಂದ ಜಮೀನು ಪಡೆದು ವಸತಿ ಗೃಹಗಳನ್ನು ಕಟ್ಟಲು ಪರಿಶೀಲಿಸುತ್ತಿದೆ. ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಪಡೆದವರಿಗೆ ಮುಂಗಡ ಹಣ ಕೊಡಲಾಗುತ್ತಿದೆ. ಅಲ್ಲದೇ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಟ್ಟುತ್ತಿರುವ ಇಡಬ್ಲ್ಯೂಎಸ್ ಮನೆಗಳ ಪೈಕಿ ಕೆಲವನ್ನು ಪೌರಕಾರ್ಮಿಕರಿಗೆ ಅಲಾಟ್ ಮಾಡುವ ವಿಚಾರವು ಪರಿಶೀಲನೆಯಲ್ಲಿದೆ. ಬೆಂಗಳೂರು ಮಹಾನಗರ